ಅಂತ ಕರೆಯೋಣ್ವಾ?' ಎಂದು ಸೂಚಿಸಿದಳು.

ಇವರಿಬ್ಬರೂ ನಗುತ್ತಾ 'ಚೆನ್ನಾಗಿದೆ. ಕರಿಜಡೆ, ಬಿಳಿಜಡೆ' ಎನ್ನುತ್ತಾ ಕೇಕೆಹಾಕಿ ಒಪ್ಪಿಗೆ ಸೂಚಿಸಿದರು.

'ಸರಿ ಇಬ್ಬರಿಗೂ ಇವತ್ತು ಹುಟ್ಟಿದಹಬ್ಬ ಮಾಡೋಣ. ನಾನು ಕರಿಜಡೆಗೆ ಸ್ನಾನ ಮಾಡಿಸಿ ಜಡೆ ಹೆಣೆತೀನಿ, ನೀವು ಬಟ್ಟೆ ಹಾಕಿ. ಹಾಗೆ ಬಿಳಿಜಡೆಗೂ ಸ್ನಾನ ಮಾಡಿಸಿ, ಜಡೆ ಹೆಣೆದು ಬಟ್ಟೆ ಹಾಕೋಣ' ಎಂದು ಪಿಂಕಿ ಹೇಳಿದಾಗ ಲಗುಬಗೆಯಿಂದ ಇವರಿಬ್ಬರು ಕೆಲಸ ಪ್ರಾರಂಭಿಸಿಬಿಟ್ಟರು.

ನಾನು ಅಲ್ಲೇ ಇವರ ಆಟವನ್ನು ನೋಡುತ್ತಾ ನಿಂತಿದ್ದೆ. ಎಂಟು ವರ್ಷದ ಪೋರಿ ಪಿಂಕಿಯು ಅಪರಿಚಿತರಾದ ಇವರಿಬ್ಬರ ಜೊತೆ ಆತ್ಮೀಯವಾಗಿ ಬೆರೆತು, ಆಡುವ ಆಟದ ಬಗ್ಗೆ ಒಮ್ಮತವನ್ನು ಸಾಧಿಸಿ, ಏನೇನು ಮಾಡಬೇಕು ಎಂಬುದನ್ನು ಸೂಚಿಸಿದ ಪರಿ ನನ್ನನ್ನು ಬೆರಗುಗೊಳಿಸಿಬಿಟ್ಟಿತ್ತು.

'ಅಯ್ಯೋ! ಹಬ್ಬದ ಅಡುಗೆ ಮಾಡಬೇಕು, ಕೇಕ್ ತರಬೇಕು, ತಾಳಿ...' ಎಂದು ಪಿಂಕಿ, ನನ್ನ ಬಳಿ ಓಡಿಬಂದು 'ಅಜ್ಜಿಆಂಟಿ ಇವತ್ತು ಬೊಂಬೆಗಳ ಹುಟ್ಟಿದ ಹಬ್ಬ. ಒಂದು ಕಟೋರಿಯಲ್ಲಿ ಹುರಿಗಡ್ಲೆ, ಕಡಲೆಕಾಯಿ, ಜೊತೆಗೆ ಇಷ್ಟು ದಪ್ಪದ ಮೂರು ಬೆಲ್ಲದ ಚೂರು ಕೊಡಿ' ಎಂದು ತನ್ನ ಮೂರು ಬೆರಳುಗಳನ್ನು ಸಾಕಷ್ಟು ದೊಡ್ಡದೇ ಮಾಡಿ ತೋರಿಸಿದಳು.

ನಾನು ಸಂತೋಷದಿಂದ 'ಬಾರಮ್ಮ ಕೊಡ್ತೀನಿ...' ಎಂದು ಅಡುಗೆಮನೆಯ ಕಡೆ ನಡೆದೆ.

'ಅದು ಸರಿ, ನನಗೆ ಏನು ಸ್ಪೆಷಲ್ ತಿಂಡಿ ಮಾಡ್ಕೊಡ್ತೀರಾ ಇವತ್ತು?' ಎನ್ನುವ ಪಿಂಕಿಯ ಪ್ರಶ್ನೆ ನನ್ನನ್ನು ವಾಸ್ತವಕ್ಕೆ ತಂದಿತ್ತು.

'ನಿನಗೆ ಏನು ಬೇಕು ಹೇಳು ಪುಟ್ಟಿ, ಅದನ್ನೇ ಮಾಡಿಕೊಡ್ತೀನಿ' ಎಂದೆ.

'ನಿಮಗೆ ತೊಂದರೆ ಆಗದಿದ್ದರೆ ಪೂರಿ ಪಲ್ಯ ಮಾಡಿಕೊಡ್ತೀರಾ? ನಂಗೆ ಅದು ತುಂಬಾ ಇಷ್ಟ.'

'ಆಗಲಿ, ನೀವು ಆಟ ಆಡ್ತ ಇರಿ, ನಾನು ಬೇಗ ಮಾಡಿಕೊಡ್ತೀನಿ.'

'ನಮ್ಮ ಅಜ್ಜಿ ಸಹಾಯವನ್ನು ತೊಗೊಳ್ಳಿ. ಬೇಗ ಆಗುತ್ತೆ. ಪಲ್ಯಕ್ಕೆ ಜಾಸ್ತಿ ಖಾರ ಹಾಕಬೇಡಿ. ಎರಡು ಮೆಣಸಿನಕಾಯಿ ಕಡಿಮೆ ಹಾಕಿ' ಎಂದು ಕಡಲೆ, ಬೆಲ್ಲವನ್ನು ಹಿಡಿದು ಆಟದ ಕೋಣೆಗೆ ಓಡಿದಳು.

ನಾನು ಪೂನಿ ಕಡೆ ತಿರುಗಿ 'ಏನೇ ನಿನ್ನ ಮೊಮ್ಮಗಳು! ನಮ್ಮ ಅತ್ತೆ ಕೂಡ ಹೀಗೆ ಸೂಚನೆ ಕೊಟ್ಟಿರ್ಲಿಲ್ಲ!' ಎಂದೆ.

ಅವಳು ನಗುತ್ತಾ 'ನಾನು ಏನು ಹೇಳಲ್ಲ, ನೀನೆ ನೋಡ್ಕೋ' ಎಂದಳು.

'ತಿಂಡಿ ರೆಡಿ ಆಯಿತು, ಬನ್ನಿ...' ಎಂದು ಊಟದ ಮೇಜಿನ ಮೇಲೆ ತಟ್ಟೆಗಳನ್ನು ಇಡುತ್ತಾ ಕರೆದೆ. ಮೂವರು ಓಡಿಬಂದರು.

'ಅಜ್ಜಿಆಂಟೀ ಟೇಬಲ್ ಮೇಲೆ ಬೇಡ. ನೆಲದ ಮೇಲೆ ಕೂತ್ಕೋತಿವಿ...' ಎಂದು, ತನ್ನ ಸ್ನೇಹಿತರ ಕಡೆ ತಿರುಗಿ, 'ನಿನ್ನೆದೋ ಮೊನ್ನೆದೋ ನ್ಯೂಸ್ ಪೇಪರ್ ತಗೊಂಡು ಬನ್ರೇ' ಎಂದು ಆದೇಶಿಸಿದಳು. ಒಂದು ಕ್ಷಣದಲ್ಲಿ ಹಳೆಪೇಪರ್ ಅವಳ ಕೈಯಲ್ಲಿತ್ತು. 'ಹೀಗೆ ಹರಡಿ...' ಎಂದು ಅದನ್ನು ನೆಲದ ಮೇಲೆ

